ಶ್ರೀ ಸಿ. ಆರ್. ರಂಗೇಗೌಡ:—ನಾಲ್ಕು ರಸ್ತೆಗಳಲ್ಲಿ ಡಿ ರಸ್ತೆ ಮಾತ್ರ ಸೇರಿಲ್ಲವೆಂದು ಹೇಳಿದ್ದೀರಿ ಆದ್ದರಿಂದ ತಾವು ಇವೆಲ್ಲವನ್ನೂ ತೆಗೆದುಕೊಂಡು ಕೆಲಸ ಮಾಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲವೇ?

ಶ್ರೀ ಕೆ. ಲಕ್ಕಪ್ಪ: ಈಗ ಗಮನಕ್ಕೆ ತಂದಿದ್ದಾರೆ, ಅದನ್ನು ವಿಚಾರ ಮಾಡಿ, ಅದನ್ನು ಮುನಿಸಿಪಾಲಿಟಿಯವರು ನಡೆಸಬೇಕೇ, ಅಥವಾ ನಾವು ಮಾಡಬೇಕೆ ಎಂಬುದನ್ನು ವಿಚಾರ ಮಾಡುತ್ತೇವೆ: ಮತ್ತು ತೆಗೆದುಕೊಳ್ಳುವುದು ಆಗತ್ಯವಿದ್ದ ಪಕ್ಷದಲ್ಲಿ ತೆಗೆದುಕೊಳ್ಳುತ್ತೇವೆ.

CADRE AND RECRUITMENT RULES OF THE POSTS OF JUNIOR ENGINEER.

542 SRI SADASHIVAPPA PATIL (Deodurg)—

Will the Minister for Public Works be pleased to state:—

(*a*) the Cadre and Recruitment Rules for the promotion of non-graduates and graduates to the posts of Assistant Engineers in Public Works Department:

(*b*) the number of existing vacancies of the Posts of Assistant Engineers in Public Works Department:

(*c*) how the existing vacancies are being filled up:

(*d*) whether the present Cadre and Recruitment Rules are strictly followed while filling up the vacancy?

SRI K. LAKKAPPA MINISTER FOR PUBLIC WORKS

(*a*) *Assistant Engineers* (*Division 1*)

33 1/3 perc ent by direct recruitment by the Public Service Commission after interview and oral test.

66 2/3 percent by promotion from the cadre of Junior Engineers.

For direct recruitment

Age: Must not be above 31 years. A Pass in Civil or Mehcanical Engineering Graduation Examination or a Certficate or Diploma from the Institute of Engineers that the candidate has passed Part A and B of the Associate Membership Examination of the Institute of Engineers or aquivelent qualification with practical training for not less than six months during or after the course.

Probation: 2years.

For Promotion: Must posses the same educational qualifica ion as for direct recruitment.

Assistant Engineers (Division-2)

By promotion from the cadres of Junior Engineers, of persons other than those who are eligible for promotion to the cadre of Assistant Engineers (Division-1) and of persons in the cadre of Draughtsman in the ratio 7:1 every eighth vacancy being filled by a Draughtsman provided that if no suitable Draughtsman is available for promotion, the vacancy to be filled by promotion from the cadre of Junior Engineers of persons other than those who are eligible for promotion to the cadre of Assistant Engineers (Division 1).

(*b*) 8 vacancies as on 19-1-1970 against the qouta for draughts men are available. Some more vacancies are likely to arise on the creation of new posts.

(*c*) By promotion.

(*d*) Yes.

ಶ್ರೀ ಸದಾಶಿವಪ್ಪ ಪಾಟೀಲ್:— ಈ ಖಾಲಿ ಹುದ್ದೆಗಳಿಗೆ ಹೇಗೆ ಬಡ್ತಿ ಮಾಡಲಾಗುತ್ತದೆ ಎಂದು ಕೇಳಿದರೆ, ಬಡ್ತಿ ನೀಡುವ ಮೂಲಕ ಎಂದು ಹೇಳಿದ್ದಾರೆ. ಬಡ್ತಿ ನೀಡುವ ಕಾಲಕ್ಕೆ ಎಸ್‌ಆರ್‌ಸಿ. ಆಕ್ಟನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿದ್ದೀರಾ ಮತ್ತು ಎಷ್ಟು ಹೊಸ ಮೈಸೂರಿನ ಜನರಿಗೆ ಬಡ್ತಿ ನೀಡಿದ್ದೀರಿ?

ಶ್ರೀ ಕೆ. ಲಕ್ಕಪ್ಪ; ಅದನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಕಟ್ಟುನಿಟ್ಟಾಗಿ ಮಾಡಿದ್ದೇವೆ. ಆದರೆ ಹಳೆ ಮೈಸೂರು ವಿರಿಯಾದಲ್ಲಿ ಎಷ್ಟು ಜನರಿಗೆ ಕೊಟ್ಟಿದೆ, ಹೊಸ ಮೈಸೂರಿನಲ್ಲಿ ಎಷ್ಟು ಜನರಿಗೆ ಕೊಟ್ಟಿದೆ ಎನ್ನುವ ಮಾಹಿತಿ ನನ್ನ ಹತ್ತಿರ ಇಲ್ಲ. ಜನರನ್ನು ಆರಿಸುವಾಗ ಇರತಕ್ಕ ರೂಲ್ಸ್ ಅಂಡ್ ರೆಗ್ಯುಲೇಶನ್ ಪ್ರಕಾರ ಮಾತ್ರ ಆರಿಸುತ್ತೇವೆ.

ಶ್ರೀ ಸದಾಶಿವಪ್ಪ ಪಾಟೀಲ್: ರಿಕ್ರೂಟ್‌ಮೆಂಟ್ ಮಾಡುವ ಕಾಲದಲ್ಲಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸಿಗೆ ಯಾವ ರೀತಿ ರಿಸರ್ವೇಶನ್ ಮಾಡುತ್ತೀರಿ, ಅದೇ ರೀತಿ ತಾವು ಬಡ್ತಿ ನೀಡುವ ಕಾಲದಲ್ಲೂ ಮಾಡಿದ್ದೀರಾ?

ಶ್ರೀ ಕೆ. ಲಕ್ಕಪ್ಪ: ಈ ಡೈರೆಕ್ಟ್ ರಿಕ್ರೂಟ್‌ಮೆಂಟಿನ ಸಂದರ್ಭದಲ್ಲಿ ಮಾತ್ರ ಈ ರಿಸರ್ವೇಶನನ್ನು ಅನುಸರಿಸುತ್ತಾರೆ, ಬಾಕಿ ಸಂದರ್ಭದಲ್ಲಿ ಅನುಸರಿಸುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ:— ಲೋಕ ಸೇವಾ ಆಯೋಗದವರು ಸಂದರ್ಶನ ಮತ್ತು ವಾಕ್ ಪರೀಕ್ಷೆ ನಡೆಸಿದ ನಂತರ ನೇರವಾಗಿ ನೇಮಕ ಮಾಡಿಕೊಳ್ಳುವುದು ಎಂದು ಹೇಳುತ್ತೀರಿ. ಇಲ್ಲಿ ರಿಟನ್ ಎಗ್ಸಾಮಿನೇಶನ್ ಇಂಟ್ರೊಡ್ಯೂಸ್ ಮಾಡುವುದಕ್ಕೆ ಅಭ್ಯಂತರವೇನು?

ಶ್ರೀ ಕೆ. ಲಕ್ಕಪ್ಪ: ಇಲ್ಲಿ ಪ್ರೊಮೋಶನ್ಸ್ ಪ್ರಶ್ನೆ ಇರತಕ್ಕಂತದ್ದು. ಪ್ರಮೋಶನ್ಸ್ ಕೊಡುವಾಗ ಆ ಪ್ರಶ್ನೆ ಬರುವುದಿಲ್ಲ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡತಕ್ಕ ಸಂದರ್ಭದಲ್ಲಿ ಅದು ಪರಿಶೀಲನೆ ಮಾಡಬೇಕಾದಂತಹ ವಿಚಾರ, ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—(ಅ)ಗೆ ಉತ್ತರವಾಗಿ ಡೈರಕ್ಟ್ ರೆಕ್ರೂಟ್‌ಮೆಂಟ್ ಸೇಕಡ ೩೩⅓ ಮತ್ತು ಪ್ರಮೋಷನ್ ಸೇಕಡ ೬೨⅔ ಭಾಗವೆಂದು ಹೇಳಿದೆ. ಈ ರೂಲ್ಸ್ ಎಲ್ಲಾ ವಿಭಾಗಗಳಿಗೂ ಅನ್ವಯಿಸುತ್ತದೆ. ಆದರೆ ಕೆಲವು ಇಲಾಖೆಗಳಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಜಾಸ್ತಿಯಾಗಿ ಪ್ರಮೋಷನ್ಸ್ ಕಡಿಮೆಯಾಗಿವೆ.

ಶ್ರೀ ಎಂ. ಎಸ್. ಕೃಷ್ಣನ್

ಮತ್ತೆ ಕೆಲವು ಇಲಾಖೆಗಳಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಕಡಿಮೆಯಾಗಿ ಪ್ರಮೋಷನ್ಸ್ ಜಾಸ್ತಿಯಾಗಿವೆ. ಆದ್ದರಿಂದ ಈ ವಿಚಾರದಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್‌ಅನ್ನು ಇನ್ನೂ ಕಡಿಮೆಮಾಡಿ ಪ್ರಮೋಷನ್ಸ್ ಜಾಸ್ತಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ಲಕ್ಕಪ್ಪ:—ಬೇರೆ ಬೇರೆ ಇಲಾಖೆಗಳಲ್ಲಿ ಯಾವ್ಯಾವ ರೀತಿ ಇದೆಯೆಂಬುದು ಗೊತ್ತಿಲ್ಲ. ಆದ್ದರಿಂದ ಸೇಕಡ ೩೩⅓ ರಷ್ಟು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮತ್ತು ಸೇಕಡ ೬೬⅔ ರಷ್ಟು ಪ್ರಮೋಷನ್ಸ್ ಎಂದಾಗಿ ನಿಗದಿಮಾಡಿ ಆದನ್ನು ಈಗ ಒಂದು ಮಿತಿಯಲ್ಲಿಟ್ಟುಕೊಳ್ಳುವುದು ಸರಿಯೆಂದು ಆ ರೀತಿ ಇಟ್ಟುಕೊಂಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ:—(ಆ)ನಲ್ಲಿ ಕೊಟ್ಟಿರುವ ೮ ಖಾಲಿ ಹುದ್ದೆಗಳು ಪ್ರಮೋಷನ್ ಕೋಟಾನೋ ಅಥವಾ ಡೈರೆಕ್ಟ್ ರೆಕ್ರೂಮೆಂಟ್ ಕೋಟಾನೋ?

ಶ್ರೀ ಕೆ. ಲಕ್ಕಪ್ಪ.—ಪ್ರಮೋಷನ್ ಕೋಟಾ.

ಶ್ರೀ ಎನ್.ಎ. ಚನ್ನೇಗೌಡ.—ಇಲ್ಲಿ ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂದು ಹೇಳಿ ಹೊಸ ಮೈಸೂರಿನವರ ಇಚ್ಛೆಗನುಸಾರವಾಗಿ ನಡೆಯುತ್ತಿದ್ದೀರಿ ಎಂಬುದಾಗಿ ದೂರುಗಳು ಬಂದಿವೆ. ಅದರಿಂದ ಇಲಾಖೆಯ ಕೆಲಸ ಕಾರ್ಯಗಳಿಗೆ ಬಹಳ ತೊಂದರೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ ಲಕ್ಕಪ್ಪ.—ಇಚ್ಛೆ ಬಂದಹಾಗೆ ಏನೂ ನಡೆಯುತ್ತಾ ಇಲ್ಲ. ರೂಲ್ಸ್ ಪ್ರಕಾರ ನಡೆಯುತ್ತಿದೆ. ಆದ್ದರಿಂದ ನಮಗೆ ಹಳೆಯ ಮೈಸೂರು, ಹೊಸ ಮೈಸೂರು ಎಂಬ ಭೇದಭಾವವಿಲ್ಲ.

ಶ್ರೀ ಎಂ. ನಾಗಪ್ಪ.—ಈಗ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಹೈದರಾಬಾದ್ ಕರ್ನಾಟಕಕ್ಕೇ ಬೇರೆ, ಬೊಂಬಾಯಿ ಕರ್ನಾಟಕಕ್ಕೇ ಬೇರೆ, ಹಳೆಯ ಮೈಸೂರು ಕರ್ನಾಟಕಕ್ಕೇ ಬೇರೆ ಇದೆ ಎಂದು ಕೇಳಿದ್ದೇನೆ. ಒಂದುವೇಳೆ ಹಾಗಿಲ್ಲದೇ ಇದ್ದ ಪಕ್ಷದಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ಈಗ ೨೦ ವರ್ಷಗಳಿಂದಲೂ ಸರ್ವಿಸ್‌ನಲ್ಲಿರತಕ್ಕವರು ಇವತ್ತಿನವರೆಗೆ ಪ್ರಮೋಷನ್ ಕೊಡಿಲ್ಲ. ಅವರ ಬಗ್ಗೆ ತಾರತಮ್ಯ ಮಾಡುತ್ತಿದ್ದೀರಿ. ಅವರಿಗೆ ಈಗ ಏನು ಪ್ರಮೋಷನ್ ಕೊಟ್ಟಿದ್ದೀರಿ? ಬಹಳ ಜನರು ಈಗ ಅನ್‌ಎಂಪ್ಲಾಯೀಸ್ ಆಗಿರುತ್ತಾರೆ. ಆದ್ದರಿಂದ ಸೇಕಡ ೫೦ ರಷ್ಟು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿ ಹೆಚ್ಚು ಜನಗಳಿಗೆ ನೌಕರಿಗಳನ್ನು ಒದಗಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಇಡೀ ಸಂಸ್ಥಾನಕ್ಕೆ ಅನ್ವಯಿಸುವ ಹಾಗೆ ರೂಲ್ಸ್ ಇವೆ. ಈಗ ಯಾವ ಪ್ರಮಾಣದಲ್ಲಿ ಪ್ರಮೋಷನ್ ಇಟ್ಟುಕೊಂಡಿದ್ದೇವೋ ಅದೇ ಸರಿಯಾಗಿದೆಯೆಂದು ಸರ್ಕಾರದ ಅಭಿಪ್ರಾಯ. ಅದರಂತೆ ನಡೆಸಿಕೊಂಡು ಹೋಗುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಪಿ.ಡಬ್ಲು.ಡಿ. ಇಲಾಖೆಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಯಾವಾಗ ಮಾಡಿದ್ದೀರಿ? ಆದರೆ ಇತರೇ ಇಲಾಖೆಗಳಲ್ಲಿ ಶೇಕಡ ೫೦ ರಷ್ಟು ನಿಯಮವಿದ್ದರೆ, ಈ ಇಲಾಖೆಯಲ್ಲಿ ಸೇಕಡ ೩೩⅓ ಮತ್ತು ಶೇಕಡ ೬೬⅔ ರಷ್ಟು ಎಂದು ವ್ಯವಸ್ಥೆ ಮಾಡಿದ್ದೀರಿ. ಇದಕ್ಕೆ ಕಾರಣವೇನು? ಇತರೇ ಇಲಾಖೆಗಳಲ್ಲಿರುವ ಹಾಗೆ ಇಲ್ಲಿಯೂ ಏಕೆ ಮಾಡಬಾರದು?

ಶ್ರೀ ಕೆ. ಲಕ್ಕಪ್ಪ.—ಇಲ್ಲಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾತ್ರ ಶೇಕಡ ೩೩⅓ ರಷ್ಟು. ಬಾಕಿ ಇಲಾಖೆಗಳಲ್ಲಿ ಅದು ಶೇಕಡ ೫೦ ರಷ್ಟು ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಡಿಪ್ಲೊಮಾ ಹೋಲ್ಡರ್ಸ್ ಸಾವಿರಾರು ಜನರು ಕೆಲಸವಿಲ್ಲದೆ ಬೀದಿಬೀದಿ ಅಲೆಯುತ್ತಿದ್ದಾರೆ. ಅವರು ಯಾವುದೋ ಒಂದು ಸರ್ಟಿಫಿಕೇಟ್ ತೆಗೆದುಕೊಂಡು ಬಂದಿದ್ದಾರೆಂದು ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಅನ್ಯಾಯಮಾಡಿದ್ದಾರೆ. ಅದನ್ನು ಕೂಡಲೇ ತಪ್ಪಿಸುವುದಕ್ಕೆ ತಕ್ಕ ಕ್ರಮವನ್ನು ಏನು ತೆಗೆದುಕೊಂಡಿದ್ದೀರಿ?

ಶ್ರೀ ಕೆ. ಲಕ್ಕಪ್ಪ.—ಆ ರೀತಿಯಾಗಿ ಮಾಡಿಲ್ಲ. ಆದ್ದರಿಂದ ಅದನ್ನು ಸರಿಪಡಿಸುವ ಪ್ರಮೇಯವೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಈಗಿನ ನಿಯಮದ ಪ್ರಕಾರ ಕೆಲವು ಅನ್ಯಾಯಗಳು ಆಗಿವೆ. ಈಗ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕಳೆದ ೧೦ ವರ್ಷಗಳಲ್ಲಿ ಎಷ್ಟೋಸಾರಿ ಬದಲಾವಣೆ ಯಾಗಿವೆ. ಮಂತ್ರಿಮಂಡಲ ಬದಲಾವಣೆಯಾದಂತೆಲ್ಲಾ ಅದೂ ಬದಲಾವಣೆಯಾಗುತ್ತದಲ್ಲವೇ?

ಶ್ರೀ ಕೆ ಲಕ್ಕಪ್ಪ.—ಯಾವ್ಯಾವಾಗ ಬದಲಾವಣೆ ಆಯಿತೋ ಆ ಮಾಹಿತಿ ನನ್ನಲ್ಲಿಲ್ಲ. ಪದೇಪದೇ ಆ ರೀತಿ ಬದಲಾವಣೆಯಾಗಿಲ್ಲ. ಬಹಳ ವರ್ಷಗಳ ನಂತರ ಈ ರೀತಿ ಬದಲಾವಣೆಯಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—(ಅ)ಗೆ ಉತ್ತರ ಹೇಳಿರುವ ಪ್ರಕಾರ, ಈ ಇಲಾಖೆಯಲ್ಲಿ ಇರತಕ್ಕ ವರ್ಕ್‌ಲೋಡ್‌ಗೆ ಸರಿಯಾಗಿ ಹುದ್ದೆಗಳಿದ್ದರೆ, ಏತಕ್ಕಾಗಿ ಅನೇಕರಿಗೆ ಆ ಹುದ್ದೆಗಳು ಸಿಗಲಿಲ್ಲ?

ಶ್ರೀ ಕೆ. ಲಕ್ಕಪ್ಪ.—ಇನ್ನು ಕೆಲವರಿಗೆ ಅಲ್ಲಿ ಆ ಹುದ್ದೆಗಳು ಸಿಗಲಿಲ್ಲ. ಖಾಲಿಯಾದಾಗ ಅವನ್ನು ಕೊಡುತ್ತೇವೆ. ಈಗ ೭ಕ್ಕೆ ೧ ಪ್ರೊಪೋರ್ಷನ್ ಪ್ರಕಾರ ಕೊಡುತ್ತಿದ್ದೇವೆ. ಖಾಲಿ ಬಿದ್ದಾಗ ಅದನ್ನು ವಿಚಾರಮಾಡುತ್ತೇವೆ.

EXTRA CONCESSION IN ALLOTMENT OF SITES TO SCHEDULED CASTES/SCHEDULED TRIBES PEOPLE BY C.I.T.B.

545. Sri L. SRIKANTAIAH (Nanjangud).—Will the Minister of State for Municipal Administration be pleased to state :—

(*a*) whether the Government has announced extra concessions like 10 per cent reservation in the allotment of sites by City Improvement Trust Board and loans at 3 per cent to the people belonging to Scheduled Castes and Scheduled Tribes ;

(*b*) if so, whether there is any proposal for the same extra concession being extended to the people who are socially and economically backward?

Sri B. M. PATIL (Minister of State for Municipal Administration).—

(*a*) No.

(*b*) Does not arise in view of reply to clause (*a*).

ಶ್ರೀ ಎಲ್. ಶ್ರೀಕಂಠಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಬಹುಶಃ ಇದು ಯಾವಾಗ ಪ್ರಿಂಟ್ ಆಯಿತೋ ಗೊತ್ತಿಲ್ಲ. ಇದೇ ಮಾನ್ಯ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಈ ರೀತಿಯಾಗಿ ರಿಯಾಯತಿಯನ್ನು ಪೆಡ್ಡೊಲ್ಡ್ ಕ್ಯಾಸ್ಟ್ ಮತ್ತು